ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಕುಂಬಾರರ ಸಂಘವು ಒಂದು ಟ್ರಸ್ಟ್‌ನ್ನಾಗಿ ಪರಿವರ್ತನೆಯಾಗಿರುವುದು ಕಂಡು ಬರುವುದಿಲ್ಲ. ಅಲ್ಲದೆ, ಸಂಘದ ನಿಜವಾದ ಮತದಾರರನ್ನು ಪಟ್ಟಿ ಮಾಡಿ ಚುನಾವಣೆ ನಡೆಸುವುದು ಕಷ್ಟವಾಗಿರುವುದರಿಂದ ಕರ್ನಾಟಕ ಸಂಘ ಸಂಸ್ಥೆಗಳ ಕಾಯಿದೆ, 1960ರ ಕಲಂ 27 (ಎ)ರನ್ವಯ ಆಡಳಿತಾಧಿಕಾರಿಯೆನ್ನು ನೇಮಿಸಿ ಸಂಘದ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆಸಲು ಅನುವು ಮಾಡಲು ಕೋರಿರುತ್ತದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

(8) ಲಾಲ್‌ಬಾಗ್ ಸಿದ್ದಾಪುರದಲ್ಲಿರುವ ಜಿ. ಡಬ್ಲ್ಯು. ಡಿ. ವಸತಿ ಗೃಹದಲ್ಲಿ ದ್ವಿಚಕ್ರ ವಾಹನಗಳ ನಿಲುಗಡೆ ಶೆಡ್ ಹಾಕಿಸಿಕೊಡುವುದು.

ಶ್ರೀ ರಾಮಲಿಂಗಪ್ಪ (ಬಯಸನಗರ) :– ಮಾನ್ಯ ಅಧ್ಯಕ್ಷರೇ, ಲಾಲ್‌ಬಾಗ್ ಸಿದ್ದಾಪುರದಲ್ಲಿರುವ ಜಿ. ಡಬ್ಲ್ಯು. ಡಿ. ಕ್ವಾರ್ಟರ್ಸ್‌ನ 1, 2 ಹಾಗೂ 5 ನೇ ಬ್ಲಾಕಿನಲ್ಲಿ ನೌಕರರ ದ್ವಿಚಕ್ರ ವಾಹನ ನಿಲುಗಡೆಗೆ ಶೆಡ್ ಹಾಕಿಸಿಕೊಡುವುದಾಗಿ ಕಳೆದ ಅಧಿವೇಶನದಲ್ಲಿ ತಿಳಿಸಿದರೂ ಸಹ ಸದರಿ ಕಾರ್ಯವನ್ನು ಪ್ರಾರಂಭಿಸದೆ ಇರುವುದು ಒಳಾಂಗಣದಲ್ಲಿ ನೆಲ ಸಮತಟ್ಟು ಮಾಡುವುದು, ಚರಂಡಿಯ ಮೇಲೆ ಚಪ್ಪಡಿ ಕಲ್ಲುಗಳನ್ನು ಹಾಕಿಸುವುದು ಹಾಗೂ ಮನೆಗಳಲ್ಲಿನ ಸಂಪ್ರದಾಯ ರಿಪೇರಿಗಳನ್ನು ಮಾಡಿಸುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು) :– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

ಬೆಂಗಳೂರು ಲಾಲ್‌ಬಾಗ್ ಸಿದ್ದಾಪುರದಲ್ಲಿರುವ 1, 2 ಮತ್ತು 5 ನೇ ಬ್ಲಾಕಿನಲ್ಲಿ ವಾಸವಾಗಿರುವ ಸರ್ಕಾರೀ ನೌಕರರ ಅನುಕೂಲಕ್ಕಾಗಿ ದ್ವಿಚಕ್ರ ವಾಹನ ನಿಲುಗಡೆಗೆ ಶೆಡ್ ನಿರ್ಮಾಣಕ್ಕಾಗಿ 67,000 ರೂ.ಗಳ ಮತ್ತು 34,000 ರೂ.ಗಳ ಎರಡು ಕಾಮಗಾರಿಗಳನ್ನು ಮಂಜೂರು ಮಾಡಿದ್ದು ಗುತ್ತಿಗೆಯನ್ನು ನಿಗದಿಪಡಿಸಲಾಗಿದೆ. ೀಘ್ರದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಒಳಾಂಗಣದಲ್ಲಿ ನೆಲಸಮತಟ್ಟು ಮಾಡುವುದು, ಒಳಚರಂಡಿಯ ಮೇಲೆ ಕಲ್ಲುಚಪ್ಪಡಿ ಹಾಸುವುದನ್ನು ಅನುದಾನದ ಲಭ್ಯತೆಯನ್ನು ಆನುಸರಿಸಿ ಮುಂದಿನ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದು.

(9) ಬಂಟ್ವಾಳ ತಾಲ್ಲೂಕು ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಿ, ಸಮುದಾಯ ಆಸ್ಪತ್ರೆಯನ್ನಾಗಿ ಪರಿವರ್ತಿಸುವುದು.

ಶ್ರೀ ಬಿ. ರಮಾನಾಥ ರೈ (ಬಂಟ್ವಾಳ) :– ಮಾನ್ಯ ಅಧ್ಯಕ್ಷರೇ., ಬಂಟ್ವಾಳದ ತಾಲ್ಲೂಕು ಆಸ್ಪತ್ರೆಯಲ್ಲಿ ಯಾವುದೇ ರೀತಿಯ ಸೌಲಭ್ಯವಿಲ್ಲದೆ ಜನರು ತೊಂದರೆಪಡುತ್ತಿದ್ದಾರೆ. ಈ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ ಸರ್ಕಾರವನ್ನು ಅನೇಕ ರೀತಿಯಲ್ಲಿ ಒತ್ತಾಯಿಸಿದರೂ ಈ ವರೆಗೆ ಯಾವುದೇ ಕ್ರಮ ಕೈಗೊಳ್ಳಲಾಗಿರುವುದಿಲ್ಲ. ಇದನ್ನು ಮನಗಂಡು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು ಈ ಆಸ್ಪತ್ರೆಯನ್ನು ಸಮುದಾಯ ಆಸ್ಪತ್ರೆಯಾಗಿ, ಮೇಲ್ದರ್ಜೆಗೆ ಏರಿಸುವ ಬಗ್ಗೆ ಶಿಫಾರಸ್ ಮಾಡಿರುತ್ತದೆ. ಆದರೆ, ಸರ್ಕಾರದಿಂದ ಈವರೆಗೆ ಅನುಮತಿ ಸಿಕ್ಕಿರುವುದಿಲ್ಲ. ಆದ್ದರಿಂದ ದಯವಿಟ್ಟು, ಈ ಒಂದು ತಾಲ್ಲೂಕು ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಿ, ಕಡಿಮೆ ಪಕ್ಷ ಸಮುದಾಯ ಆಸ್ಪತ್ರೆಯಾಗಿ ಪರಿವರ್ತಿಸಬೇಕಾಗಿ ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು) :– ಬಂಟ್ವಾಳ ಸಾರ್ವಜನಿಕ ಆಸ್ಪತ್ರೆಯಲ್ಲಿ 25 ಹಾಸಿಗೆಗಳ ಸೌಲಭ್ಯವಿದ್ದು ಈ ಕೆಳಕಂಡ ಸಿಬ್ಬಂದಿವರ್ಗದವರು ಕೆಲಸ ಮಾಡುತ್ತಿದ್ದಾರೆ.

ಮುದ್ದೆಯ ಹೆಸರು	ಮುದ್ದೆಗಳ ಸಂಖ್ಯೆ
1) ಸಹಾಯಕ ಶಸ್ತ್ರ ಚಿಕಿತ್ಸಕ ಹಾಗೂ ವೈದ್ಯಾಧಿಕಾರಿ	2
2) ಗ್ರೂಪ್ 'ಡಿ' ನೌಕರರು	4
3) ಆಡಿಗೆಯವರು	1
4) ಫಾರ್ಮಸಿಸ್ಟ್	2
5) ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	2
6) ಸ್ಟಾಫ್ ನರ್ಸ್	2
7) ಪ್ರಥಮ ದರ್ಜೆ ಸಹಾಯಕ	1
8) ಬೆರಳಚ್ಚುಗಾರ ಹಾಗೂ ಗುಮಾಸ್ತ	1
ಒಟ್ಟು :	15

ಈ ವರ್ಷ 10 ಸಮುದಾಯ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಗುರಿ ಇದ್ದು, ಅದರಲ್ಲಿ ಬಂಟ್ವಾಳ ಸಾರ್ವಜನಿಕ ಆಸ್ಪತ್ರೆಯನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇದೆ. ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಸಲುವಾಗಿ ರೂ. 4.00 ಲಕ್ಷ ಗಳನ್ನು ಈ ವರ್ಷದ ಆಯವ್ಯಯದಲ್ಲಿ ಒದಗಿಸಲಾಗಿದೆ. ಬಂಟ್ವಾಳ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಆವರ್ತ ವೆಚ್ಚ 5.16 ಲಕ್ಷ ರೂ. ಮತ್ತು ಅನಾವರ್ತ ವೆಚ್ಚ ರೂ. 2.5 ಲಕ್ಷ ಆಗುತ್ತದೆ.

ಈ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

(10) ಮಾಗಡಿ ತಾಲ್ಲೂಕಿನ, ಮಾಡಬಾಳು ಹೋಬಳಿ ಅಂಚಿಕುಪ್ಪೆ ಮಂಡಲ್, ಅತ್ತಿಂಗೆರೆಗೆ ಸೇರಿದ ಸರ್ವೆ ನಂ. 10 ರಲ್ಲಿ ಸೈಟನ್ನು ಅಕ್ರಮವಾಗಿ ಮಾರ್ಪಡಿಸಿರುವುದು.

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) :– ಮಾನ್ಯ ಅಧ್ಯಕ್ಷರೇ, ಮಾಗಡಿ ತಾಲ್ಲೂಕಿನ ಮಾಡಬಾಳು ಹೋಬಳಿ, ಅಂಚಿಕುಪ್ಪೆ ಮಂಡಲ್, ಅತ್ತಿಂಗೆರೆಗೆ ಸೇರಿದ ಸರ್ವೆ ನಂ. 10 ರಲ್ಲಿ 30 × 40 ಅಳತೆಯ ಸೈಟ್ ನಂ. 1 ಅನ್ನು ಶ್ರೀ ಗಂಗಯ್ಯ ಅವರಿಗೆ ನೀಡಿದ್ದು, ತದನಂತರ ಸದರಿ ಸೈಟ್‌ನ್ನು 40 × 60 ಅಳತೆಯ ನಿವೇಶನ ವನ್ನಾಗಿ ಶ್ರೀಮತಿ ರುದ್ರಮ್ಮ ಕೋಂ. ಶಿವಗಂಗಯ್ಯ ಅವರ ಹೆಸರಿಗೆ ಅಕ್ರಮವಾಗಿ ಮಾರ್ಪಡಿಸಿ, ನೀಡಿರುವುದರಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಈ ಸೂಚನೆ.

ಶ್ರೀ ಎಂ. ವೀರಪ್ಪ ಮೊಯಿಲಿ :– ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಕಾನೂನು ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವರ ಗಮನಕ್ಕೆ ತರುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್ :– ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆ, ತಿಪಟೂರಿನಲ್ಲಿ 10 ರೂಪಾಯಿಯ ಕಳ ನೋಟುಗಳನ್ನು ರೈತರಿಗೆ ಕೊಡುತ್ತಿರುವುದರಿಂದ, ಅಲ್ಲಿನ ರೈತರಿಗೆ ತೊಂದರೆಯಾಗಿದೆ. ಇದನ್ನು ತಮಗೂ ಕಳುಹಿಸಿದ್ದೇನೆ. ಅಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ, 10 ಸಾವಿರ ರೂಪಾಯಿಗಳ ನೂರು ರೂಪಾಯಿಗಳ ನೋಟುಗಳಲ್ಲಿ ಕಡಿಮೆ ಬಂದಿರುವುದು ಪರಿಶೀಲನೆಗೆ ಬಂದಿದೆ. ಈ ಅನಾಹುತವನ್ನು ತಪ್ಪಿಸುವುದಕ್ಕೆ ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ನಾಳೆ ತಾವು ದಯಮಾಡಿ ಉತ್ತರ ಕೊಡಿಸಬೇಕು.

ಜಿಲ್ಲಾ ಪರಿಷತ್ ಮಸೂದೆ ಇಂಗ್ಲೀಷನಲ್ಲಿರುವುದನ್ನು ಕನ್ನಡಕ್ಕೆ ಭಾಷಾಂತರಿಸುವ ಬಗ್ಗೆ ಚರ್ಚೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ತಿನ ಮಸೂದೆ ಕನ್ನಡದಲ್ಲಿ ಬರುತ್ತದೆ ಎಂದು ಬೆಳಿಗ್ಗೆಯಿಂದ ಕಾದಿದ್ದೆವು, ಆದರೆ ಈವರೆಗೆ ಬರಲಿಲ್ಲ. ಇದು ಕನ್ನಡದಲ್ಲಿ ಯಾವಾಗ ಬರುತ್ತದೆಯೋ ಗೊತ್ತಿಲ್ಲ. ತಾವು ಇದರ ಬಗ್ಗೆ ವಿಚಾರ ಮಾಡಿ ನಮಗೆ ತಿಳಿಸಿದರೆ, ನಾವು ಮುಂದೆ ಏನು ಮಾಡಬೇಕೆಂದು ತೀರ್ಮಾನ ತೆಗೆದುಕೊಳ್ಳುತ್ತೇವೆ.

Sri D. B. Chandre Gowda :– Yesterday I failed to mention or bring to your notice Rule 82 of the Rules of Procedure. It reads : "After a Bill has been introduced or in case of a Bill Published under rule 73 after such Bill has been published, the Bill & the Statement of objects & Reasons shall be translated into Kannada and such translations shall be published in the Gazette."

It is mentioned "SHALL". It is mandatory.

ಬಿಲ್ ಮಂಡನೆ ಮಾಡಿದ ಮೇಲೂ ಕೂಡ, ಭಾಷಾಂತರಿಸಿದ ಪ್ರತಿಯನ್ನು ಈ ಸದನಕ್ಕೆ ಮತ್ತು ಸದಸ್ಯರಿಗೆ ಕೊಡಲೇಬೇಕಾದಂಥ ಒಂದು ಆದೇಶ ಈ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ 82 ನೇ ಕಲಮಿನಲ್ಲಿ ನಮೂದಾಗಿದೆ. ಆದ್ದರಿಂದ, ದಯಮಾಡಿ ತಾವು ಇದನ್ನು ಸರಕಾರದ ಗಮನಕ್ಕೆ ತರಬೇಕು ಮತ್ತು ಇದಕ್ಕೆ ಸಂಬಂಧಪಟ್ಟ ಹಾಗೆ, ಇದುವರೆಗೂ ನಮಗೆ ಏನೂ ಬಂದಿಲ್ಲ. ಪುನಃ ಈ ದಿವಸದ ಕಲಾಪದ ಪಟ್ಟಿಯನ್ನು ಕಳುಹಿಸುವಾಗ ಮೂಲ ತಿದ್ದುಪಡಿಗೆ, ತಿದ್ದುಪಡಿಗಳೂ ಕೂಡ ಇಂಗ್ಲೀಷಿನಲ್ಲಿಯೇ ಬಂದಿವೆ. ಇದರ ಬಗ್ಗೆ ಏನು ಮಾಡಬೇಕೆಂದು ನಮಗೆ ತಿಳಿಯುತ್ತಿಲ್ಲ.